# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೨೪, ಆಗಸ್ಟ್, ೨೦೨೬ (ಭಾದ್ರಪದ, ೦೨, ಶಕವರ್ಷ, ೧೯೪೮)<br>BENGALURU, MONDAY, 24, AUGUST, 2026 (BHADRAPADA , 02, SHAKAVARSHA, 1948) | ನಂ. ೭೬೪<br>No. 764 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಹತ್ತನೇ ಅಧಿವೇಶನ**

## ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–22)**

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಪ್ರಕರಣ 15ರ ತಿದ್ದುಪಡಿ.-** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 15ನೇ ಪ್ರಕರಣದ ಉಪಪ್ರಕರಣ (3)ರ (ಬಿ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ಪೂರೈಕೆಯನ್ನು ಮಾಡಿದ ನಂತರ, ಪೂರೈಕೆದಾರರಿಂದ ಅಂಥ ಸೋಡಿಗಾಗಿ ಜಮೆಚೀಟಿ ನೀಡಲಾಗಿದ್ದರೆ ಮತ್ತು ಅಂಥ ಸೋಡಿಗೆ ಸಂಬಂಧಪಟ್ಟ ಹೂಡುವಳಿ ತೆರಿಗೆ

ಜಮೆಯನ್ನು, ಆ ಪೂರೈಕೆಯನ್ನು ಸ್ವೀಕರಿಸುವವನು ಪ್ರಕರಣ 34ರ ಉಪಬಂಧಗಳಿಗೆ ಅನುಸಾರವಾಗಿ ಹಿಂದಿರುಗಿಸಿರಬೇಕು."

**3. ಪ್ರಕರಣ 34ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 34ರಲ್ಲಿನ ಉಪ-ಪ್ರಕರಣ (1)ರಲ್ಲಿ "ಅವುಗಳೆರಡರ ಪೂರೈಕೆಯಲ್ಲಿ ಕೊರತೆ ಕಂಡುಬಂದಲ್ಲಿ" ಎಂಬ ಪದಗಳ ತರುವಾಯ, "ಅಥವಾ ಪ್ರಕರಣ 15ರ ಉಪ-ಪ್ರಕರಣ (3)ರ ಖಂಡ (ಬಿ)ಯಲ್ಲಿ ಉಲ್ಲೇಖಿಸಿರುವ ಸೋಡಿಯನ್ನು ನೀಡಿರುವಲ್ಲಿ" ಎಂಬ ಪದಗಳು, ಆವರಣಗಳು, ಅಕ್ಷರ ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

**4. ಪ್ರಕರಣ 54ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 54ರಲ್ಲಿ,-

(i) ಉಪ-ಪ್ರಕರಣ (6)ರಲ್ಲಿ "ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ" ಎಂಬ ಪದಗಳ ತರುವಾಯ, "ಅಥವಾ ಉಪ-ಪ್ರಕರಣ (3)ರ ಮೊದಲನೆಯ ಪರಂತುಕದ ಖಂಡ (ii)ರ ಅಡಿಯಲ್ಲಿ ಅನುಮತಿಸಲಾದ ಉಪಯೋಗಿಸದೇ ಉಳಿದಿರುವ ಹೂಡುವಳಿ ತೆರಿಗೆ ಜಮೆಯ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು; ಮತ್ತು

(ii) ಉಪ-ಪ್ರಕರಣ (14)ರಲ್ಲಿ "ಉಪ-ಪ್ರಕರಣ (5) ಅಥವಾ ಉಪ-ಪ್ರಕರಣ (6)ರ ಅಡಿಯಲ್ಲಿ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳ ತರುವಾಯ, "ಭಾರತದ ಹೊರಗಡೆ ತೆರಿಗೆ ಸಂದಾಯದೊಂದಿಗೆ ಸರಕುಗಳನ್ನು ರಫ್ತು ಮಾಡಿದ ಪ್ರಯುಕ್ತ, ತೆರಿಗೆ ಮರುಪಾವತಿಯನ್ನು ಕ್ಲೇಮು ಮಾಡಿರುವ ಪ್ರಕರಣಗಳನ್ನು ಹೊರತುಪಡಿಸಿದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಹೊಸ ತೆರಿಗೆ ವ್ಯವಸ್ಥೆಯಿಂದ ಉಂಟಾದ ತೊಂದರೆಗಳನ್ನು ನಿವಾರಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ನ್ನು,-

(1) ಮಾರಾಟದ ನಂತರ ನೀಡಲಾಗುವ ಸೋಡಿಯನ್ನು ಒಪ್ಪಂದದೊಂದಿಗೆ ಜೋಡಿಸುವ ಅಗತ್ಯತೆಯನ್ನು ತೆಗೆದುಹಾಕಲು ಹಾಗೂ ಸ್ವೀಕೃತಿದಾರನು ಹೂಡುವಳಿ ತೆರಿಗೆ ಜಮೆಯನ್ನು ಹಿಂತಿರುಗಿಸಿದ ಸಂದರ್ಭದಲ್ಲಿ ಪ್ರಕರಣ 34ರ ಅಡಿಯಲ್ಲಿ ಜಮೆಚೀಟಿ ನೀಡುವುದನ್ನು ಉಲ್ಲೇಖಿಸಲು ಪ್ರಕರಣ 15ರ ಉಪ-ಪ್ರಕರಣ (3)ರ ಖಂಡ (ಬಿ)-ಯನ್ನು ತಿದ್ದುಪಡಿ ಮಾಡುವುದಕ್ಕಾಗಿ;

(2) ಪ್ರಕರಣ 34ರಲ್ಲಿ ಪ್ರಕರಣ 15ರ ಉಲ್ಲೇಖವನ್ನು ಸೇರ್ಪಡೆಗೊಳಿಸಲು ಸದರಿ ಪ್ರಕರಣದ ಉಪ-ಪ್ರಕರಣ (1)ನ್ನು ತಿದ್ದುಪಡಿ ಮಾಡುವುದಕ್ಕಾಗಿ;

(3) ವಿಲೋಮ ಸುಂಕ ರಚನೆಯಿಂದ (Inverted Duty Structure) ಉದ್ಭವಿಸುವ ಮರುಪಾವತಿಗಳಿಗೂ ತಾತ್ಕಾಲಿಕ ಮರುಪಾವತಿಯ ಉಪಬಂಧಗಳನ್ನು ವಿಸ್ತರಿಸಲು ಪ್ರಕರಣ 54ರ ಉಪ-ಪ್ರಕರಣ (6)ನ್ನು ತಿದ್ದುಪಡಿ ಮಾಡುವುದಕ್ಕಾಗಿ;

(4) ತೆರಿಗೆ ಪಾವತಿಯೊಂದಿಗೆ ಭಾರತದಿಂದ ಹೊರಗೆ ರಫ್ತು ಮಾಡಲಾದ ಸರಕುಗಳಿಗೆ ಸಂಬಂಧಿಸಿದ ಮರುಪಾವತಿ ಕೋರಿಕೆಗಳನ್ನು ಮಂಜೂರು ಮಾಡುವುದಕ್ಕೆ ಅನ್ವಯಿಸುವ ಕನಿಷ್ಠಮಿತಿಯನ್ನು ತೆಗೆದುಹಾಕಲು ಪ್ರಕರಣ 54ರ ಉಪ-ಪ್ರಕರಣ (6)ನ್ನು ತಿದ್ದುಪಡಿ ಮಾಡುವುದಕ್ಕಾಗಿ,

- ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂ.27)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಿ.ಕೆ. ಶಿವಕುಮಾರ್**
ಮುಖ್ಯಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮ, 2017
## (2017ರ ಕರ್ನಾಟಕ ಅಧಿನಿಯಮ ಸಂ. 27)ರ ಉದ್ಧೃತ ಭಾಗ

**XXX XXX XXX**

**15. ತೆರಿಗೆದಾಯಕ ಪೂರೈಕೆಯ ಮೌಲ್ಯ.- XXX XXX XXX**

(3) ಪೂರೈಕೆಯ ಮೌಲ್ಯವು ಈ ಕೆಳಕಂಡ ಯಾವುದೇ ಸೋಡಿಗಳನ್ನು ಒಳಗೊಳ್ಳುವುದಿಲ್ಲ,-

(ಎ) ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕಿಂತ ಮೊದಲು ನೀಡಿದ ಸೋಡಿಯನ್ನು ಅಂಥ ಪೂರೈಕೆಗೆ ಸಂಬಂಧಿಸಿದಂತೆ ನೀಡಲಾದ ಬೆಲೆಪಟ್ಟಿಯಲ್ಲಿ ಯುಕ್ತವಾಗಿ ದಾಖಲಿಸಿದ್ದರೆ ಅಂಥ ಸೋಡಿ; ಮತ್ತು

(ಬಿ) ಪೂರೈಕೆಯನ್ನು ಮಾಡಿದ ನಂತರ ನೀಡಿದ ಸೋಡಿ, ಆದರೆ,-

(i) ಅಂಥ ಸೋಡಿಯು ಅಂಥ ಪೂರೈಕೆಯ ಸಮಯದಲ್ಲಿ ಅಥವಾ ಅದಕ್ಕಿಂತ ಮುನ್ನವೇ

ಮಾಡಿಕೊಂಡ ಒಪ್ಪಂದದ ಪ್ರಕಾರ ಸ್ಥಾಪಿತವಾದ ಮತ್ತು ಸಂಬಂಧಪಟ್ಟ ಬೆಲೆಪಟ್ಟಿಗಳಿಗೆ ನಿರ್ದಿಷ್ಟವಾಗಿ ಸಂಬಂಧಿಸಿರಬೇಕು; ಮತ್ತು

(ii) ಅಂಥ ಸೋಡಿಗೆ ಸಂಬಂಧಪಟ್ಟ ಹೂಡುವಳಿ ತೆರಿಗೆಯ ಜಮೆಯನ್ನು, ಆ ಪೂರೈಕೆಯನ್ನು

ಸ್ವೀಕರಿಸುವವನು ಪೂರೈಕೆದಾರನು ನೀಡಿದ ದಸ್ತಾವೇಜಿನ ಆಧಾರದ ಮೇಲೆ ಹಿಂದಿರುಗಿಸಿರಬೇಕು.

**XXX XXX XXX**

**34. ಜಮೆ ಮತ್ತು ಖರ್ಚು ಚೀಟಿಗಳು.-** (1) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ತೆರಿಗೆ ಬೆಲೆಪಟ್ಟಿಗಳನ್ನು ನೀಡಲಾಗಿದ್ದಲ್ಲಿ ಮತ್ತು ಆ ತೆರಿಗೆ ಬೆಲೆಪಟ್ಟಿಯಲ್ಲಿ ತೆರಿಗೆದಾಯಕ ಮೌಲ್ಯವು ಅಥವಾ ವಿಧಿಸಲಾಗಿರುವ ತೆರಿಗೆಯು, ಅಂಥ ಪೂರೈಕೆಗೆ ಸಂಬಂಧಿಸಿದ ತೆರಿಗೆದಾಯಕ ಮೌಲ್ಯವನ್ನು ಅಥವಾ ಸಂದಾಯ ಮಾಡಬೇಕಾದ ತೆರಿಗೆಯನ್ನು ಮೀರಿರುವಂತೆ ಕಂಡುಬಂದಾಗ, ಅಥವಾ ಪೂರೈಕೆ ಮಾಡಿದ ಸರಕುಗಳು ಸ್ವೀಕರಿಸುವವನಿಂದ ಹಿಂದಿರುಗಿಸಲ್ಪಟ್ಟಿದ್ದಲ್ಲಿ ಅಥವಾ ಮಾಡಿರುವ ಸರಕು

ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಯಲ್ಲಿ ಕೊರತೆ ಕಂಡುಬಂದಲ್ಲಿ ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ ಮಾಡಿರುವ ನೋಂದಾಯಿತ ವ್ಯಕ್ತಿಯು ಸ್ವೀಕರಿಸುವವನಿಗೆ ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡಿರುವ, ಒಂದು ಹಣಕಾಸು ವರ್ಷದಲ್ಲಿ ಮಾಡಿದ ಪೂರೈಕೆಗಳಿಗಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ಜಮೆ ಚೀಟಿಗಳನ್ನು ನೀಡತಕ್ಕದ್ದು.

**XXX XXX XXX**

**54. ತೆರಿಗೆಯ ಮರುಪಾವತಿ.- XXX XXX XXX**

(6) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ನೋಂದಾಯಿತ ವ್ಯಕ್ತಿಗಳ ವರ್ಗವನ್ನು ಹೊರತುಪಡಿಸಿದ ನೋಂದಾಯಿತ ವ್ಯಕ್ತಿಗಳಿಂದ, ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ-ದರ ಪೂರೈಕೆಯ ಪ್ರಯುಕ್ತ ಮರುಪಾವತಿಗಾಗಿ ಮಾಡಿರುವ ಯಾವುದೇ ಕ್ಲೇಮಿನ ಸಂದರ್ಭದಲ್ಲಿ, ಯುಕ್ತ ಅಧಿಕಾರಿಯು, ಹಾಗೆ ಕ್ಲೇಮು ಮಾಡಿದ ಒಟ್ಟು ಮೊತ್ತದ ಶೇಕಡಾ ತೊಂಬತ್ತರಷ್ಟನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳು, ಮಿತಿಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಮರುಪಾವತಿ ಮಾಡಬಹುದು ಮತ್ತು ತದನಂತರ ಅರ್ಜಿದಾರನಿಂದ ಒದಗಿಸಿದ ದಸ್ತಾವೇಜುಗಳ ಯುಕ್ತ ಪರಿಶೀಲನೆಯ ನಂತರ ಮರುಪಾವತಿ ಕ್ಲೇಮಿನ ಅಂತಿಮ ಇತ್ಯರ್ಥಕ್ಕಾಗಿ ಉಪಪ್ರಕರಣ (5)ರ ಅಡಿಯಲ್ಲಿ ಆದೇಶ ಮಾಡಬಹುದು.

**XXX XXX XXX**

(14) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತವಿದ್ದರೆ, ಉಪಪ್ರಕರಣ (5) ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಮರುಪಾವತಿಯನ್ನು, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದಲ್ಲ.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**TENTH SESSION**

## THE KARNATAKA GOODS AND SERVICES TAX (AMENDMENT) BILL, 2026
## (LA Bill No. 22 of 2026)

A Bill further to amend the Karnataka Goods and Services Tax Act, 2017(Karnataka Act 27 of 2017).

Whereas, it is expedient further to amend the Karnataka Goods and Services Tax Act, 2017 (Karnataka Act 27 of 2017), for the purpose hereinafter appearing;

Be it enacted by the Karnataka State Legislature in the seventy seventh year of the Republic of India as follows:-

**1. Short title and commencement.-** (1) This Act may be called the Karnataka Goods and Services Tax (Amendment) Act, 2026.

(2) It shall come into force at once.

**2. Amendment of section 15.-** In the Karnataka Goods and Services Tax Act, 2017 (Karnataka Act 27 of 2017) (hereinafter referred to as the Principal Act), in section 15, in sub-section (3), for clause (b), the following clause shall be substituted, namely:-

"(b) after the supply has been effected, if for such discount, a credit note has been issued by the supplier and input tax credit as is attributable to such discount has been reversed by the recipient of the supply, in accordance with the provisions of section 34.".

**3. Amendment of section 34.-** In the Principal Act, in section 34 of the principal Act, in sub-section (1), after the words "both supplied are found to be deficient", the words, brackets, letter and figures "or where a discount referred to in clause (b) of sub-section (3) of section 15 is given", shall be inserted.

**4. Amendment of section 54.-** In the Principal Act, in section 54,-

(i) in sub-section (6), after the words "supply of goods or services or both", the words, brackets, letters and figure "or of un utilized input tax credit allowed under clause (ii) of the first proviso to sub-section (3)", shall be inserted; and

in sub-section (14), after the words, brackets and figures "sub-section (5) or sub-section (6)", the words", other than cases where refund of tax is claimed on account of goods exported out of India with payment of tax," shall be inserted.

## STATEMENT OF OBJECTS AND REASONS

In order to overcome the difficulties faced due to the new tax regime, it is considered necessary to amend the Karnataka Goods and Services Tax Act, 2017 (Karnataka Act No. 27 of 2017) to,-

(1) amend clause (b) of sub-section (3) of section 15 of the Act, to do away with the requirement of linking the post-sale discount with an agreement and to refer to issuance of credit note under section 34 where the input tax credit is reversed by the recipient;

(2) amend sub-section (1) of section 34 of the Act, as to include the reference of section 15 in the said section;

(3) amend sub-section (6) of section 54 of the Act, to extend the provisions of provisional refund to refunds arising out of inverted duty structure; and

(4) amend sub-section (14) of section 54 of the Act, to remove the threshold limit for sanction of refund claims in case of goods exported out of India with payment of tax.

Hence, the Bill

**FINANCIAL MEMORANDUM**

There is no extra expenditure involved in the proposed legislative measure.

**D. K. SHIVAKUMAR**
Chief Minister

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA GOODS AND SERVICES TAX ACT, 2017 (KARNATAKA ACT NO.27 OF 2017)**

**XXX XXX XXX**

**15. Value of taxable supply.- XXX XXX XXX**

(3) The value of the supply shall not include any discount which is given—

(a) before or at the time of the supply if such discount has been duly recorded in the invoice issued in respect of such supply; and

(b) after the supply has been effected, if –

(i) such discount is established in terms of an agreement entered into at or before the time of such supply and specifically linked to relevant invoices; and

(ii) input tax credit as is attributable to the discount on the basis of document issued by the supplier has been reversed by the recipient of the supply.

**XXX XXX XXX**

**34. Credit and debit notes.-** (1) Where one or more tax invoices have been issued for supply of any goods or services or both and the taxable value or tax charged in that tax invoice is found to exceed the taxable value or tax payable in respect of such supply, or where the goods supplied are returned by the recipient, or where goods or services or both supplied are found to be deficient, the registered person, who has supplied such goods or services or both, may issue to the recipient

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



one or more credit notes for supplies made in a financial year containing such particulars as may be prescribed.

**XXX XXX XXX**

**54. Refund of tax.-** **XXX XXX XXX**

(6) Notwithstanding anything contained in sub-section (5), the proper officer may, in the case of any claim for refund on account of zero-rated supply of goods or services or both made by registered persons, other than such category of registered persons as may be notified by the Government on the recommendations of the Council, refund on a provisional basis, ninety per cent. of the total amount so claimed, in such manner and subject to such conditions, limitations and safeguards as may be prescribed and thereafter make an order under sub-section (5) for final settlement of the refund claim after due verification of documents furnished by the applicant.

**XXX XXX XXX**

(14) Notwithstanding anything contained in this section, no refund under sub-section (5) or sub-section (6) shall be paid to an applicant, if the amount is less than one thousand rupees.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU